ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.–01/2022 ದಿನಾಂಕ: 19–08–2022

ಪ್ರಕಟಣೆ

ವ್ಯಾಸಂಗ ಪ್ರಮಾಣ ಪತ್ರ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ ಮತ್ತು ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಇಂಜಿನಿಯರಿಂಗ್ ರ್‍ಯಾಂಕ್ ಆಧಾರದ ಮೇಲೆ ಪರಿಶೀಲಿಸಿ ಅಪ್‌ಲೋಡ್ ಮಾಡಲು ವೇಳಾಪಟ್ಟಿ

(ಅರ್ಹತಾ ಕಂಡಿಕೆ "ಎ" ಮತ್ತು "ಬಿ" ಅಭ್ಯರ್ಥಿಗಳಿಗೆ)

| DATE | Forenoon Session-1<br>9.30 a.m. – 11.00 a.m.<br>Reporting Time: 8.45 a.m. | | Forenoon Session-2<br>11.15 a.m. – 1.15 p.m.<br>Reporting Time: 10.45 a.m. | | Afternoon Session-1<br>2.00 pm onwards<br>Reporting Time: 1.30 p.m. | |
|---|---|---|---|---|---|---|
| | Engineering Rank Numbers | | Engineering Rank Numbers | | Engineering Rank Numbers | |
| | **From** | **To** | **From** | **To** | **From** | **To** |
| 22-08-2022 | 1 | 1800 | 1801 | 3600 | 3601 | 5000 |
| 23-08-2022 | 5001 | 6800 | 6801 | 8600 | 8601 | 10000 |
| 24-08-2022 | 10001 | 14000 | 14001 | 18000 | 18001 | 20000 |
| 25-08-2022 | 20001 | 24000 | 24001 | 28000 | 28001 | 30000 |
| 26-08-2022 | 30001 | 35000 | 35001 | 40000 | 40001 | 42000 |
| 27-08-2022 | 42001 | 47000 | 47001 | 52000 | 52001 | 54000 |
| 29-08-2022 | 54001 | 59000 | 59001 | 64000 | 64001 | 66000 |
| 01-09-2022 | 66001 | 71000 | 71001 | 76000 | 76001 | 78000 |
| 02-09-2022 | 78001 | 84000 | 84001 | 90000 | 90001 | 94000 |
| 03-09-2022 | 94001 | 100000 | 100001 | 106000 | 106001 | 110000 |
| 05-09-2022 | 110001 | 117000 | 117001 | 124000 | 124001 | 130000 |
| 06-09-2022 | 130001 | 138000 | 138001 | 146000 | 146001 | 150000 |
| 07-09-2022 | 150001 | 158000 | 158001 | 164000 | 164001 | Last Rank |

ವಿವಿಧ ವ್ಯಾಸಂಗ ಪ್ರಮಾಣ ಪತ್ರಗಳ ಪರಿಶೀಲನೆಗೆ (BEO) ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಭೇಟಿ ನೀಡುವ ಮೊದಲು, ಆನ್‌ಲೈನ್ ದಾಖಲಾತಿ ಪರಿಶೀಲನೆಯ ಬಗ್ಗೆ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಹೋಸ್ಟ್ ಮಾಡಿರುವ ಸೂಚನೆಗಳನ್ನು ಮತ್ತು ಮಾರ್ಗದರ್ಶನಗಳನ್ನು ಅಭ್ಯರ್ಥಿಗಳು ಮತ್ತು ಪೋಷಕರು ಓದುಕೊಳ್ಳುವುದು.

ಕಾರ್ಯನಿರ್ವಾಹಕ ನಿರ್ದೇಶಕರು

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.–01/2022 ದಿನಾಂಕ: 19–08–2022

## ಪ್ರಕಟಣೆ – ಆನ್‌ಲೈನ್ ದಾಖಲೆಗಳ ಪರಿಶೀಲನೆ

ಯುಜಿಸಿಇಟಿ 2022ರ ವೃತ್ತಿಪರ ಕೋರ್ಸುಗಳ ಪ್ರವೇಶಾತಿಗೆ ದಾಖಲಾತಿ ಪರಿಶೀಲನೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆನ್‌ಲೈನ್ ಮೂಲಕ ನಡೆಸಲು ಯೋಜಿಸಲಾಗಿದೆ. ಅದರಂತೆ ದಾಖಲಾತಿ ಪರಿಶೀಲನಾ ಕಾರ್ಯವು ಪ್ರಗತಿಯಲ್ಲಿದೆ. ಸುಮಾರು 1,71,000 ಅಭ್ಯರ್ಥಿಗಳು ಸೀಟು ಹಂಚಿಕೆ ಪ್ರಕ್ರಿಯೆಗೆ ಅರ್ಹರಿರುತ್ತಾರೆ.

ಅಭ್ಯರ್ಥಿಗಳಿಗೆ ಕಂದಾಯ ಇಲಾಖೆಯಿಂದ ನೀಡಲಾಗುವ ದಾಖಲೆಗಳಾದ ಜಾತಿ / ಆದಾಯ / 371ಜೆ ಪ್ರಮಾಣ ಪತ್ರಗಳನ್ನು ಆರ್‌ಡಿ ಸಂಖ್ಯೆಯ ಆಧಾರದ ಮೇರೆಗೆ ಆನ್‌ಲೈನ್ ಮುಖಾಂತರ ಪರಿಶೀಲನೆ ನಡೆಸಲಾಗುವುದು. ಇದರ ಜೊತೆಗೆ 10ನೇ ತರಗತಿಯ ಅಂಕಪಟ್ಟಿಯನ್ನು ಅವರ ಜನ್ಮ ದಿನಾಂಕ, ತಂದೆ/ತಾಯಿಯ ಹೆಸರು ತಾವು ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯ ಡಾಟಾದೊಂದಿಗೆ ಆನ್‌ಲೈನ್ ಮುಖಾಂತರ ಪರಿಶೀಲಿಸಲಾಗುತ್ತದೆ.

ಇದಲ್ಲದೆ ಅರ್ಹತಾ ಪರೀಕ್ಷೆಯಾದ ಎರಡನೇ ಪಿಯುಸಿ / 12ನೇ ತರಗತಿಯ ಅಂಕಗಳನ್ನೂ ಪದವಿ ಪೂರ್ವ ಇಲಾಖೆಯ ಡಾಟಾದೊಂದಿಗೆ ಆನ್‌ಲೈನ್ ಮೂಲಕ ಪರಿಶೀಲಿಸಲಾಗುತ್ತಿದೆ.

ಈ ಪರಿಶೀಲನಾ ಕಾರ್ಯದಲ್ಲಿ ಸುಮಾರು ಅಭ್ಯರ್ಥಿಗಳು ಜಾತಿ / ಆದಾಯ /371ಜೆ /ಭಾಷಾ ಅಲ್ಪಸಂಖ್ಯಾತ ಪ್ರಮಾಣ ಪತ್ರಗಳ ಆರ್‌ಡಿ ಸಂಖ್ಯೆಯನ್ನು ಸರಿಯಾಗಿ ನಮೂದಿಸಿರುವುದಿಲ್ಲ, ಹಾಗೂ ತಮ್ಮ ಕಾಲೇಜು/ ಶಾಲೆಯ ವಿವರಗಳನ್ನು ನಮೂದಿಸುವಾಗ ಜಿಲ್ಲಾ / ತಾಲ್ಲೂಕು ವಿವಿರಗಳನ್ನು ನಮೂದಿಸಿರುವುದಿಲ್ಲ. ಇಂತಹ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಅವರು ತಮ್ಮ ಆರ್‌ಡಿ ಸಂಖ್ಯೆಯನ್ನು ಸರಿಯಾಗಿ ನಮೂದಿಸಲು ಹಾಗೂ ಶಾಲಾ ಕಾಲೇಜಿನ ಹೆಸರು/ ತಾಲ್ಲೂಕು / ಜಿಲ್ಲೆ ಇವುಗಳನ್ನು ಸರಿಯಾಗಿ ನಮೂದಿಸಲು ದಿನಾಂಕ. 19–08–2022 ರ ರಾತ್ರಿ 8.00 ರಿಂದ 21–08–2022 ರವರೆಗೆ ಅವಕಾಶವನ್ನು ನೀಡಲಾಗುತ್ತಿದೆ.

ದಿನಾಂಕ. 22–08–2022 ರಿಂದ 07–09–2022 ರವರೆಗೆ ರಾಜ್ಯದ ಎಲ್ಲಾ ಜಿಲ್ಲೆ/ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳು ಆಯಾ ಶಾಲೆಗಳಿಗೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಛೇರಿಗೆ ವ್ಯಾಸಂಗ ಪ್ರಮಾಣ ಪತ್ರ, ಕನ್ನಡ ವ್ಯಾಸಂಗ ಪ್ರಮಾಣ ಪತ್ರ, ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ ಹಾಗು ಅಗತ್ಯತೆ ಇದ್ದಲ್ಲಿ ಪೋಷಕರ ವ್ಯಾಸಂಗ ಪ್ರಮಾಣ ಪತ್ರದ ಅಗತ್ಯ ದಾಖಲೆಗಳನ್ನು ಹಾಜರುಪಡಿಸಿ, ಪರಿಶೀಲನೆಗೆ ಒಳಪಡಿಸಬೇಕಾಗುತ್ತದೆ.

ದಿನಾಂಕ 22–08–2022 ರಿಂದ ಆಯಾ ಜಿಲ್ಲೆ / ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಅವರ ಕಛೇರಿಯ ಪ್ರೋಗ್ರಾಮರ್ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳೊಂದಿಗೆ ಅವರುಗಳ ಕಛೇರಿಯಲ್ಲಿ ಅಭ್ಯರ್ಥಿಗಳ ವ್ಯಾಸಂಗ ಪ್ರಮಾಣ ಪತ್ರ, ಕನ್ನಡ ಮಾಧ್ಯಮ, ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಆನ್‌ಲೈನ್ ಮೂಲಕ ಕೆಇಎ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

ಬೆಂಗಳೂರು ಜಿಲ್ಲೆಯಲ್ಲಿ ಒಟ್ಟು 08 ಕ್ಷೇತ್ರ ಶಿಕ್ಷಣಾಧಿಕಾರಿಗಳಿದ್ದು (N1, N2, N3, N4 & S1, S2, S3, S4), ಬೆಂಗಳೂರು ಜಿಲ್ಲೆಯಲ್ಲಿ ಪ್ರಾಧಿಕಾರದಲ್ಲಿರುವ ಮಾಹಿತಿಯನುಸಾರ ಸುಮಾರು 40,000 ಅಭ್ಯರ್ಥಿಗಳು ಸೀಟು ಹಂಚಿಕೆ ಪ್ರಕ್ರಿಯೆಗೆ ಅರ್ಹರಿರುತ್ತಾರೆ. ಸದರಿ ಅಭ್ಯರ್ಥಿಗಳು ಬೆಂಗಳೂರಿನ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳು ವಿವಿಧ ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಛೇರಿಗೆ ಹೋಗಬೇಕೆಂಬ ಗೊಂದಲ ಉಂಟಾಗದೇ ಇರಲು, ಬೆಂಗಳೂರಿನಲ್ಲಿ ಸದರಿ ಯೋಜನೆಯನ್ನು ಪ್ರಾಯೋಗಿಕವಾಗಿ ಮೊದಲ ಬಾರಿಗೆ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಕೆಇಎ ಕಛೇರಿಯಲ್ಲಿಯೇ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಪ್ರಸಕ್ತ ಸಾಲಿನಿಂದ ದಾಖಲೆಗಳ ಪರಿಶೀಲನೆಯನ್ನು ಆನ್‌ಲೈನ್ ಮುಖಾಂತರ ಮಾಡಲಾಗುವುದು. ಅರ್ಹತಾ ಕಂಡಿಕೆ "ಎ" ಮತ್ತು "ಬಿ" ಅಭ್ಯರ್ಥಿಗಳಿಗೆ ಈ ಕೆಳಗೆ ವಿವರಿಸಿರುವಂತೆ ಆನ್‌ಲೈನ್ ಪರಿಶೀಲನೆಯನ್ನು ನಡೆಸಲಾಗುವುದು.

| ಕ್ರಮ ಸಂಖ್ಯೆ | ದಾಖಲೆಗಳ ವಿವರ | ಪರಿಶೀಲಿಸುವ ವಿಧಾನ |
|---|---|---|
| 01 | ಸಿಇಟಿ-2022ಕ್ಕೆ ಭರ್ತಿ ಮಾಡಿ ಅಂತಿಮವಾಗಿ ಸಲ್ಲಿಸಿರುವ ಪ್ರತಿ. | ಆನ್‌ಲೈನ್ – ಕೆಇಎ |
| 02 | "ಸಾಮಾನ್ಯ ಪ್ರವೇಶ ಪರೀಕ್ಷೆ-2022" ರ ಮೂಲ ಪ್ರವೇಶ ಪತ್ರ | ಆನ್‌ಲೈನ್ – ಕೆಇಎ |
| 03 | ಎಸ್‌ಎಸ್‌ಎಲ್‌ಸಿ/ 10ನೇ ತರಗತಿಯ ಅಂಕಪಟ್ಟಿ / ಜನ್ಮ ದಿನಾಂಕ | ಆನ್‌ಲೈನ್ – ಸಂಬಂಧಿಸಿದ ಪರೀಕ್ಷಾ ಮಂಡಳಿಯ ಡಾಟಾ ದೊಂದಿಗೆ |
| 04 | 2ನೇ ಪಿಯುಸಿ / 12ನೇ ತರಗತಿಯ ಅಂಕಗಳು | ಆನ್‌ಲೈನ್ – ಸಂಬಂಧಿಸಿದ ಪರೀಕ್ಷಾ ಮಂಡಳಿಯ ಡಾಟಾ ದೊಂದಿಗೆ |
| 05 | 7 ವರ್ಷದ ವ್ಯಾಸಂಗ ಪ್ರಮಾಣ ಪತ್ರ:<br>1 ರಿಂದ 12ನೇ ತರಗತಿಯವರೆಗೆ ಒಟ್ಟು 7 ವರ್ಷದ ವ್ಯಾಸಂಗ ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಒಳಗೊಂಡಂತೆ. | ಅಭ್ಯರ್ಥಿಗಳು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ಹೋಗಿ ಪರಿಶೀಲನೆ ಮಾಡಿಕೊಳ್ಳಬೇಕು |
| 06 | ಕನ್ನಡ ಮಾಧ್ಯಮ ವ್ಯಾಸಂಗ – ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದಲ್ಲಿ | ಅಭ್ಯರ್ಥಿಗಳು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ಹೋಗಿ ಪರಿಶೀಲನೆ ಮಾಡಿಕೊಳ್ಳಬೇಕು |
| 07 | ಗ್ರಾಮೀಣ ವ್ಯಾಸಂಗ ಒಂದರಿಂದ ಹತ್ತನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿದ್ದಲ್ಲಿ | ಅಭ್ಯರ್ಥಿಗಳು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗೆ ಹೋಗಿ ಪರಿಶೀಲನೆ ಮಾಡಿಕೊಳ್ಳಬೇಕು |
| 08 | ಜಾತಿ ಪ್ರಮಾಣ ಪತ್ರ/ ಜಾತಿ ಮತ್ತು ಆದಾಯ:<br>(ಚಾಲ್ತಿಯಲ್ಲಿರುವ / **Validity** ಇರುವ) | ಆನ್‌ಲೈನ್ – ಆರ್‌ಡಿ ಸಂಖ್ಯೆಯನ್ನು ಸಂಬಂಧಿಸಿದ ಕಚೇರಿಯ ಡಾಟಾ ದೊಂದಿಗೆ ತಾಳೆ ಮಾಡಿ ಮಾಡಲಾಗುವುದು |
| 09 | 371(ಜೆ)-ಹೈದರಾಬಾದ್-ಕರ್ನಾಟಕ ಪ್ರದೇಶ ಮೀಸಲಾತಿ : | ಆನ್‌ಲೈನ್ – ಆರ್‌ಡಿ ಸಂಖ್ಯೆಯನ್ನು ಸಂಬಂಧಿಸಿದ ಕಚೇರಿಯ ಡಾಟಾ ದೊಂದಿಗೆ ತಾಳೆ ಮಾಡಿ ಮಾಡಲಾಗುವುದು |
| 10 | "ಸಂಖ್ಯಾಧಿಕ ಕೋಟಾ" (Supernumerary Quota): | ಆನ್‌ಲೈನ್ – ಆರ್‌ಡಿ ಸಂಖ್ಯೆಯನ್ನು ಸಂಬಂಧಿಸಿದ ಕಚೇರಿಯ ಡಾಟಾ ದೊಂದಿಗೆ ತಾಳೆ ಮಾಡಿ ಮಾಡಲಾಗುವುದು |

ಆನ್‌ಲೈನ್ ದಾಖಲಾತಿ ಪರಿಶೀಲನೆಯ ಕುರಿತು ವಿವರವಾದ ವೇಳಾಪಟ್ಟಿಯನ್ನು ಹಾಗೂ ವಿಶೇಷ ಪ್ರವರ್ಗದ ಅಭ್ಯರ್ಥಿಗಳಿಗೆ ಮಾರ್ಗಸೂಚಿಯನ್ನು ಈ ಕೆಳಗಿನಂತೆ ನೀಡಲಾಗಿದೆ:

"ಎ" ಮತ್ತು "ಬಿ" ಅರ್ಹತಾ ಕಂಡಿಕೆಗಳನ್ನು (eligibility clause code "a" and "b") ಕ್ಲೇಮ್ ಮಾಡಿರುವ ಅಭ್ಯರ್ಥಿಗಳು ವ್ಯಾಸಂಗ ಪ್ರಮಾಣ ಪತ್ರದ ಪರಿಶೀಲನೆಗಾಗಿ ಅಭ್ಯರ್ಥಿಗಳು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಪರಿಶೀಲನೆ ಮಾಡಲು ಈ ಕೆಳಗೆ ವಿವರಿಸಿರುವಂತೆ ಸೂಚನೆಗಳನ್ನು ಹಾಗು ಕ್ರಮಗಳನ್ನು ಪಾಲಿಸತಕ್ಕದ್ದು.

1) ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆ / ಕಾಲೇಜುಗಳಿಗೆ ನಿಗದಿಯಾಗಿರುವ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಆಯಾ ದಿನಾಂಕಗಳಂದು ಇಂಜಿನಿಯರಿಂಗ್ ರ‍್ಯಾಂಕ್ ಆಧಾರದ ಮೇಲೆ ಈ ಕೆಳಗೆ ವಿವರಿಸಿರುವ ಮೂಲ ದಾಖಲೆಗಳೊಂದಿಗೆ ಹೋಗುವುದು.

2) ಸಿಇಟಿ–2022 ರ ಪ್ರವೇಶ ಪತ್ರ, ಅರ್ಜಿ ಪ್ರಿಂಟ್ ಮಾಡಿದ ಪ್ರತಿ, 10ನೇ ತರಗತಿ ಅಂಕಪಟ್ಟಿ, ಮೊದಲನೇ ಮತ್ತು ಎರಡನೇ ಪಿಯುಸಿ / 11 ಮತ್ತು 12ನೇ ತರಗತಿ ಅಂಕಪಟ್ಟಿ, ಮತ್ತು ಆಯಾ ಶಾಲೆಯ ಮುಖ್ಯೋಪಾಧ್ಯಯರು ಸಹಿ ಮಾಡಿ ನೀಡಿರುವ ಮೂಲ ವ್ಯಾಸಂಗ ಪ್ರಮಾಣ ಪತ್ರದೊಂದಿಗೆ ಹಾಜರಾಗುವುದು.

3) ಅದೇ ರೀತಿ ಅಭ್ಯರ್ಥಿಗಳು ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ಅರ್ಜಿಯಲ್ಲಿ ನಮೂದಿಸಿದ್ದಲ್ಲಿ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ ಮತ್ತು ಒಂದರಿಂದ ಹತ್ತನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿ ಅರ್ಜಿಯಲ್ಲಿ ನಮೂದಿಸಿದ್ದಲ್ಲಿ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ತೆಗೆದುಕೊಂಡು ಹೋಗುವುದು.

4) ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಭ್ಯರ್ಥಿಗಳು ಸಲ್ಲಿಸುವ ವ್ಯಾಸಂಗ ಪ್ರಮಾಣ ಪತ್ರ, ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ, ಗ್ರಾಮೀಣ ಪ್ರದೇಶ ವ್ಯಾಸಂಗ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಅಭ್ಯರ್ಥಿಗಳ ಡಾಟಾವನ್ನು ಆನ್‌ಲೈನ್ ಮೂಲಕ ಸಲ್ಲಿಸುತ್ತಾರೆ.

5) “ಬಿ” ಅರ್ಹತಾ ಕಂಡಿಕೆಯನ್ನು ಕ್ಲೇಮ್ ಮಾಡಿರುವ ಅಭ್ಯರ್ಥಿಗಳು ಪೋಷಕರ ವ್ಯಾಸಂಗ ಪ್ರಮಾಣಪತ್ರಗಳನ್ನೂ ಸಹ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ತೆಗೆದುಕೊಂಡು ಹೋಗಬೇಕು.

6) ಉಳಿದ ದಾಖಲೆಗಳು ಅಂದರೆ, 10ನೇ ತರಗತಿ ಅಂಕಪಟ್ಟಿ, ಎರಡನೇ ಪಿಯುಸಿ / 12ನೇ ತರಗತಿ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ / ಜಾತಿ ಆದಾಯ ಪ್ರಮಾಣ ಪತ್ರಗಳನ್ನು ನೇರವಾಗಿ ಸಂಬಂಧಿಸಿದ ಇಲಾಖೆಗಳಿಂದ ಪ್ರಾಧಿಕಾರವು ಆನ್‌ಲೈನ್ ಪರಿಶೀಲನೆ ಮಾಡುತ್ತದೆ. ಜಾತಿ ಪ್ರಮಾಣ ಪತ್ರ / ಜಾತಿ ಆದಾಯ ಪ್ರಮಾಣ ಪತ್ರಗಳನ್ನು ಅಭ್ಯರ್ಥಿಗಳು ನಮೂದಿಸಿರುವ RD ಸಂಖ್ಯೆ ಮೂಲಕ, ಎರಡನೇ ಪಿಯುಸಿ / 12ನೇ ತರಗತಿ ಅಂಕಪಟ್ಟಿ ಹಾಗು 10ನೇ ತರಗತಿ ಅಂಕಪಟ್ಟಿಯನ್ನು ಸ್ಟೂಡೆಂಟ್ ನಂಬರ್ ಮೂಲಕ ಸಂಬಂಧಿಸಿದ ಇಲಾಖೆಗಳಿಂದ ಆನ್‌ಲೈನ್ ಮುಖಾಂತರ ತಾಳೆ ಮಾಡಲಾಗುತ್ತದೆ.

7) 371(ಜೆ)–ಹೈದರಾಬಾದ್–ಕರ್ನಾಟಕ ಪ್ರದೇಶ ಮೀಸಲಾತಿ ವಿವರಗಳು ಮತ್ತು ಆದಾಯ ಪ್ರಮಾಣ ಪತ್ರದ ವಿವರಗಳನ್ನೂ ಸಹ ಅಭ್ಯರ್ಥಿಗಳು ನಮೂದಿಸಿರುವ RD ಸಂಖ್ಯೆ ಆಧಾರದ ಮೇಲೆ ಆನ್‌ಲೈನ್ ಮುಖಾಂತರ ತಾಳೆ ಮಾಡಲಾಗುತ್ತದೆ.

8) ಅರ್ಹತೆ ಪಡೆಯುವ ಅಭ್ಯರ್ಥಿಗಳು ತಮ್ಮ ಪರಿಶೀಲನಾ ಪತ್ರವನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಲಾಗಿನ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವುದು. ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕಗಳನ್ನು ಪ್ರಚುರ ಪಡಿಸಲಾಗುವುದು.

9) ಒಂದು ವೇಳೆ ವಿವಿಧ ಕಾರಣಗಳಿಂದಾಗಿ ಅರ್ಹತೆ ಪಡೆಯಲು ವಿಫಲರಾದಲ್ಲಿ ಅಂತಹ ಅಭ್ಯರ್ಥಿಗಳಿಗೆ ಆಫ್‌ಲೈನ್ ಮೂಲಕ ಪರಿಶೀಲನೆಗಾಗಿ ಅವಕಾಶ ನೀಡಿ ಆಫ್‌ಲೈನ್ ಪರಿಶೀಲನೆಗೆ ದಿನಾಂಕಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು / ಪ್ರಚುರ ಪಡಿಸಲಾಗುವುದು.

10) "ಎ" ಮತ್ತು "ಬಿ" ಅರ್ಹತಾ ಕಂಡಿಕೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅರ್ಹತೆ ಕಂಡಿಕೆ ಅಭ್ಯರ್ಥಿಗಳು (other than "a" and "b" eligibility clause code candidates) ಆಫ್‌ಲೈನ್ ಮುಖಾಂತರ ಪರಿಶೀಲನೆಗೆ ಗೊತ್ತುಪಡಿಸುವ ದಿನಾಂಕಗಳಂದು ಹಾಜರಾಗಬೇಕು. (ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು)

11) ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳ ವಿಳಾಸವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ ಅಥವಾ ಅಭ್ಯರ್ಥಿಗಳು ತಾವು ವ್ಯಾಸಂಗ ಮಾಡಿದ ಶಾಲೆಯ ಮುಖ್ಯಸ್ಥರನ್ನು ವಿಚಾರಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳ ವಿಳಾಸವನ್ನು ಪಡೆಯಬಹುದು.

12) ಕ್ಷೇತ್ರ ಶಿಕ್ಷಣಾಧಿಕಾರಿಗಳು = Block Education Officer (BEO)

ಕಾರ್ಯನಿರ್ವಾಹಕ ನಿರ್ದೇಶಕರು